ದಿ.18.11.2019. O S 240/2014 PW-1

ದಿ.18.11.2019 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು 4 ಮತ್ತು 5 ನೇ ಪ್ರತಿ ವಾದಿಗಳ ಪರ ಶ್ರೀ ಟಿ ಎನ್ ಆರ್ ವಕೀಲರಿಂದಃ-</u>**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಇಬಬರು ಮಕ್ಕಳಿದ್ದು ಒಬ್ಬ ಹೆಣ್ಣು ಮಗಳು ಇದ್ದರು, ಅವರು ತೀರಿಕೊಂಡಿರುತ್ತಾರೆ, ಒಬಬ ಗಂಡು ಮಗ ಇದ್ದು ಹರೀಶ್ ಕುಮಾರ್ ಅವರ ಹೆಸರಾಗಿದ್ದು ಅವರಿಗೆ ಅಪಘಾತದಲ್ಲಿ ಬುದ್ದಿ ಭ್ರಮೆ ಆಗಿರುತ್ತದೆ. ಈ ದಾವೆ ಸಲ್ಲಿಸಿದ ನಂತರ ಅಪಘಾತ ಆಗಿತ್ತು. ಈ ದಾವೆಯಲ್ಲಿ ನನ್ನ ಮಗನನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

ನನ್ನ ಮಾವ ಅಂದರೆ ನನ್ನ ಗಂಡನ ತಂದೆಯ ಹೆಸರು ಮಡ್ಡೇಲಿಂಗೇಗೌಡ ಆಗಿರುತ್ತದೆ. ನಿಮ್ಮ ಮಾವನ ಹೆಸರು ದೊಡ್ಡಲಿಂಗೇಗೌಡ ಆಗಿರುವುದಿಲ್ಲ ಎಂದರೆ ಸಾಕ್ಷಿ ಅ ಹೆಸರಿನಿಂದಲೂ ಕರೆಯುತ್ತಿದ್ದರು ಎಂದು ನುಡಿಯುತ್ತಾರೆ. ಹಾಗಾದರೆ ನಿಮ್ಮ ಮಾವನ ಹೆಸರನ್ನು ಮಡ್ಡೇಲಿಂಗೇಗೌಡ ಉರುಫ್ ದೊಡ್ಡಲಿಂಗೇಗೌಡ ಎಂದು ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಾನವನನ್ನು ದೊಡ್ಡಲಿಂಗೇಗೌಡ ಎಂದು ಕರೆಯುತ್ತಿದ್ದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

4 ನೇ ಪ್ರತಿವಾದಿಯ ಗಂಡ ನನ್ನ ಮಾವನಿಗೆ ಹಿರಿಯ ಮಗ ಆಗಿದ್ದರು. 5 ನೇ ಪ್ರತಿವಾದಿ ಓದೇಗೌಡರ ಸೊಸೆ ಎಂದರೆ ಸರಿ .

ಓದೇಗೌಡರಿಗೆ ಒಬ್ಬನೇ ಮಗನಿದ್ದು ಅವರ ಹೆಸರು ಹರ್ಷ

ಆಗಿರುತ್ತದೆ. ಹರ್ಷರವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿಮ್ಮ ಮಾವನವರಿಗೆ ದಾವಾ ಆಸ್ತಿ ಬಿಟ್ಟು ಬೇರೆ ಎಷ್ಟು ಆಸ್ತಿಗಳು ಇದ್ದವು ಎಂದರೆ ಸಾಕ್ಷಿ 10 ರಿಂದ 12 ಎಕರೆ ಇತ್ತು ನನಗೆ ಸರಿಯಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಮಾವನವರಿಗೆ ನಿಮ್ಮ ಗಂಡ, 4 ನೇ ಪ್ರತಿವಾದಿಯ ಗಂಡ ಇವರನ್ನು ಬಿಟ್ಟು ಇನ್ನು ಎಷ್ಟು ಜನ ಗಂಡು ಮಕ್ಕಳು ಇದ್ದರು ಎಂದರೆ ಸಾಕ್ಷಿ ಪುಟ್ಟಸಿದ್ದೇಗೌಡ ಉರುಫ್ ಮರೀಗೌಡರವರು ಇರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಗಳನ್ನು ನನ್ನ ಮಾವ ನನಗೆ ಪಂಚಾಯ್ತಿ ಪಾರಿಕತ್ ಮೂಲಕ ಕೊಟ್ಟಿರುತ್ತಾರೆ. ಅಪಂಚಾಯ್ತಿ ಪಾರಿಕತ್ ಅನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇವೆ ಎಂದು ನುಡಿಯುತ್ತಾರೆ. ಪಂಚಾಯ್ತಿ ಪಾರಿಕತ್ ಅನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆ ಪಂಚಾಯ್ತಿ ಪಾರಿಕತ್ ಯಾವಾಗ ಆಯಿತು ದಿನಾಂಕ, ತಿಂಗಳು ಮತ್ತು ವರ್ಷ ಹೇಳುತೀರಾ ಎಂದರೆ ಸಾಕ್ಷಿ ನನಗೆ ಓದಲು ಬರದ ಕಾರಣ ಹೇಳಲು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಭಾವ ಓದೇಗೌಡರನ್ನು ಮಿಲ್ಟ್ರಿ ಓದೇಗೌಡ ಎಂದು ಕೂಡ ಕರೆಯುತ್ತಾರೆ ಎಂದರೆ ಸರಿ.

ಯಾವ ಸರ್ವೆ ನಂಬರ್ ನಲ್ಲಿ ನಿಮ್ಮ ಪ್ರಕಾರ ಮನೆ ಕಟ್ಟಿದ್ದೀರಿ ಎಂದರೆ ಸಾಕ್ಷಿ ಸರ್ವೆ ನಂಬರ್ 2/6 ರಲ್ಲಿ ಎಂದು ನುಡಿಯುತ್ತಾರೆ. ಸರ್ಕಾರಿದಿಂದ ಹಣ ಪಡೆದು ಅ ಮನೆ ಕಟ್ಟಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಆ ಮನೆಗೆ ಗ್ರಾಮ ಪಂಚಾಯ್ತಿಯವರು ಖಾನೇಷು ಮಾರಿ ಸಂಖ್ಯೆಯನ್ನು ನೀಡಿದ್ದಾರೆ ಎಂದರೆ ಸರಿ. ಆ ಖಾನೇಷು ಮಾರಿ ಸಂಖ್ಯೆಗೆ

ಸಂಬಂಧಪಟ್ಟ ದಾಖಲೆಗಳನ್ನು ನೀಡಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 2/6 ನ್ನು ಕಣದ ಹೊಲ ಎಂದು ಕೂಡ ಕರೆಯುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ಮನೆಯ ದಕ್ಷಿಣಕ್ಕೆ ಓದೇಗೌಡರು ಸಹ ಮನೆ ಕಟ್ಟಡ ಮಾಡಿಕೊಂಡು ವಾಸ ಇದ್ದರು ಎಂದರೆ ಸರಿ. ಓದೇಗೌಡರು ಮಿಲ್ಟ್ರಿ ಯಿಂದ ನಿವೃತ್ತಿ ಹೊಂದಿ ಬಂದ ನಂತರ ಸರ್ವೆ ನಂಬರ್ 2/6 ರಲ್ಲಿ ಆರ್ ಸಿ ಸಿ ಮತ್ತು ಆಸ್ಬರ್ ಶೀಟ್ ಮನೆ ಕಟ್ಟಿಕೊಂಡು ವಾಸವಿದ್ದರು ಎಂದರೆ ಸರಿ. ಆ ಮನೆ ಅಳತೆ ಪೂರ್ವ ಪಶ್ಚಿಮ 50 ಅಡಿಗಳು, ಉತ್ತರ ದಕ್ಷಿಣ 65 ಅಡಿಗಳು ಎಂದರೆ ನನಗೆ ಗೊತ್ತಿಲ್ಲ. ಓದೇಗೌಡರಿಗೆ ಈ ಮನೆಯ ಉತ್ತರ ದಿಕ್ಕಿಗೆ ಅಂದರೆ ನಿಮ್ಮ ಮನೆ ಕಡೆ ಎಂದು ಖಾಲಿ ನಿವೇಶನ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ನನ್ನದಾಗಿರುತ್ತದೆ ಎಂದು ನುಡಿಯುತ್ತಾರೆ. ಆ ಖಾಲಿ ನಿವೇಶನದ ಅಳತೆ ಪೂರ್ವ ಪಶ್ಚಿಮ 50 ಅಡಿಗಳು, ಉತ್ತರ ದಕ್ಷಿಣ 78 ಅಡಿಗಳು ಎಂದರೆ ನನಗೆ ಗೊತ್ತಿಲ್ಲ.

ನನ್ನ ಮಾವ ತೀರಿಕೊಂಡು 10 ರಿಂದ 15 ವರ್ಷ ಆಗಿರುತ್ತದೆ. ಓದೇಗೌಡರು ನನ್ನ ಗಂಡ ತೀರಿಕೊಂಡ ನಂತರ ತೀರಿಕೊಂಡಿರುತ್ತಾರೆ. ಈಗ ಮೇಲೆ ಹೇಳಿದ ಓದೇಗೌಡರ ಮನೆ ಮತ್ತು ಖಾಲಿ ನಿವೇಶನ ಓದೇಗೌಡರ ಮರಣಾನಂತರ ಅವರ ಹೆಂಡತಿಯಾದ 4 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಯಿತು ಎಂದರೆ ಮಾಡಿಕೊಂಡಿರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರು ಖಾತೆ ಮಾಡಿಕೊಂಡ ವಿಚಾರ ನಿಮಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಮನೆ ಮತ್ತು ಖಾಲಿ ನಿವೇಶನದ ಖಾತೆ 4 ನೇ ಪ್ರತಿವಾದಿಯ ಹೆಸರಿನಿಂದ ಹರ್ಷ ರವರ ಹೆಸರಿಗೆ ಬದಲಾವಣೆ ಗೊಂಡಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲದಂತೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಅವುಗಳಿಗೆ ಖಾನೇಷು ಮಾರಿ ಸಂಖ್ಯೆ ಕೊಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅವುಗಳ

ಖಾನೇಷು ಮಾರಿ ಸಂಖ್ಯೆ 200/1, 200/2 ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರವಾಗಿ ಖಾತೆ ತಕರಾರು ಸಲ್ಲಿಸಿ ಅಫೀಲು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತಿತಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂಬರ್ 2/6 ರ ಸ್ವತ್ತನ್ನು ಅಳತೆ ಮಾಡಿಸಲು ನಾನು ಆರ್ಜಿ ಸಲ್ಲಿಸಿದೆನು. ಸರ್ವೆಯರ್ ಅಳತೆ ಮಾಡಿರುತ್ತಾರೆ. ಈ ವಿಚಾರವಾಗಿ ನಕಾಶೆ, ಮಹಜರು ಮತ್ತು ವರದಿಯನ್ನು ಸರ್ವೆಯರ್ ಸಲ್ಲಿಸಿರುತ್ತಾರೆ ಎಂದರೆ ಸರಿ.

ನಿಪಿ-10 ರಲ್ಲಿ ಕಪ್ಪು ಪ್ರದೇಶದಲ್ಲಿ ಮನೆಗಳು ಇವೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಹಾಗೆಯೇ ನಿಪಿ-10 ರಲ್ಲಿ ಹಸಿರು ಬಣ್ಣದಲ್ಲಿ ತೋರಿಸಿರುವ ಪ್ರದೇಶವನ್ನು ಸರ್ವೆನಂಬರ್ 2/5 ರ ಹಿಡುವಳಿದಾರರು ಒತ್ತುವರಿ ಮಾಡಿದ್ದಾರೆ ಎಂದು ತೋರಿಸಲಾದೆ ಎಂದರೆ ನನಗೆ ಗೊತ್ತಾಗುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು).**

**ಓ ಹೇ ಕೇ ಸ ಓ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ.ಎಫ್.ಸಿ ಚನ್ನಪಟ್ಟಣ.**